
ವಿಷಯ ಬಿಡಿ. ಆಧ್ಯಾತ್ಮಿಕವಾಗಿ ಚಿಂತನೆ ಮಾಡುವವರು 'ನಾನು(ನೀನು) ಯಾರು' ಎಂಬ ಪ್ರಶ್ನೆಗೆ ನಾನು ಇಂತವನು/ಇಂತವಳು ಎಂದು ಹೆಸರು ಹೇಳಿದರೆ ಅದು ಗುರುತಿಗಾಗಿ ಇಟ್ಟದ್ದು ಮಾತ್ರ ಎಂದು ಹೆಸರಿನ ಅಸ್ತಿತ್ವವನ್ನೇ ಸಾರಾಸಗಟಾಗಿ ತಳ್ಳಿಹಾಕುತ್ತಾರೆ. ಪಾಪ, ಆ ಹೆಸರಿಗೆ ಜೀವವಿದ್ದಿದ್ದರೆ ಅದು ಎಷ್ಟು ನೊಂದುಕೊಳ್ಳುತ್ತಿತ್ತೋ ಆ ದೇವರೇ ಬಲ್ಲ.

ನಮ್ಮ ಹಿರಿಯರು ತಮಾಷೆಗಾಗಿ ಆಗಾಗ ಕೆಲವು ಹೆಸರುಗಳನ್ನು ಹೇಳುವುದುಂಟು. ಯಾರೋ ಒಬ್ಬರ ಮನೆಯಲ್ಲಿ ಸಾಲಾಗಿ ಒಂದರ ಹಿಂದೆ ಒಂದರಂತೆ ಕ್ರಿಕೆಟ್ ಟೀಮಿನ ಥರ ಹನ್ನೊಂದು ಮಕ್ಕಳಾಗಿ ಇನ್ನೊಂದು ಎಕ್ಸ್‌ಟ್ರಾ ಬರುವ ಸೂಚನೆ ಇದ್ದಾಗ ಆ ಸಾಲು ಅಲ್ಲಿಗೇ ನಿಲ್ಲಲಿ ಎಂಬ ಉದ್ದೇಶದಿಂದ ಬರಲಿರುವ ಮಗುವಿಗೆ ಸಾಕಮ್ಮ/ಸಾಕಪ್ಪ ಎಂದು ಹೆಸರಿಡಲು ಯೋಚಿಸಿದರಂತೆ. ಇನ್ನೊಬ್ಬರ ಮನೆಯಲ್ಲಿ ಹುಟ್ಟುತ್ತಿದ್ದ ಮಕ್ಕಳೆಲ್ಲಾ ಸಾವಿಗೀಡಾದಾಗ ಬರಲಿರುವ ಮಗು ಕಲ್ಲುಗುಂಡಿನಂತೆ ಗಟ್ಟಿಮುಟ್ಟಾಗಿರಲಿ ಎಂದು ಮಗುವಿಗೆ ಗುಂಡಪ್ಪ/ಗುಂಡಮ್ಮ ಎಂದು ಹೆಸರಿಡುತ್ತೇವೆ ಎಂದು ದೇವರಲ್ಲಿ ಹರಕೆ ಹೊತ್ತರಂತೆ.



ಇನ್ನು ಕೆಲವರು ಇಡುವ ಹೆಸರುಗಳು ಆ ಮಗುವಿನ ಗುಣಸ್ವಭಾವಕ್ಕೆ, ರೂಪಿಗೆ ತದ್ವಿರುದ್ಧವಾಗಿರುತ್ತವೆ. ಧವಳಿ ಎಂದು ಹೆಸರಿರುವ ಮಗು ಕಪ್ಪಗಿರುತ್ತದೆ. ನೀಳವೇಣಿಯ ತಲೆಗೂದಲು ಒಂದು ರೂಪಾಯಿಯ ಕೊತ್ತಂಬರಿ ಕಟ್ಟಿನಂತೆ ಸಣ್ಣಗಿರುತ್ತದೆ. ಕೃಷ್ಣನ ಬಣ್ಣ ಮಹಾಭಾರತದ ಶ್ರೀಕೃಷ್ಣನಂತಿರದೆ ಹೃತಿಕ್ ರೋಷನ್ ಥರ ಬೆಳ್ಳನೆ ಬಿಳುಪಾಗಿರುತ್ತದೆ. ಧನಲಕ್ಷ್ಮಿಯ ಹತ್ತಿರ, ಪಾಪ, ಬೇಕಾದಾಗ ಚಿಲ್ಲರೆಯೂ ಇರುವುದಿಲ್ಲ. ಭೀಮರಾಯ ಕಡ್ಡಿ ಪೈಲ್ವಾನನಂತೆ ಇರುತ್ತಾನೆ. ಇನ್ನು ಈಗಿನ ಟ್ರೆಂಡ್ ಪ್ರಕಾರ ಮಗುವಿಗೆ ಅಪ್ಪಅಮ್ಮನ ಹೆಸರಿನ ಅಕ್ಷರಗಳು ಬರುವಂತೆ ಇಡುವುದು ಫ್ಯಾಷನ್ ಆಗಿಬಿಟ್ಟಿದೆ. ಕೆಲವೊಮ್ಮೆ

